# ಅಮ್ಮನ ಸೇರಿದ ಮೂರು ಮರಿಗಳು

■ ಕೆ. ನಿರ್ಮಲ ಮರಡಿಹಳ್ಳಿ
ಕಲೆ: ಸಂತೋಷ್ ಸಸಿಹಿತ್ಲು



ಒಂದೂರಲ್ಲಿ ಗೌಡರ ಗುಂಡಪ್ಪ ಅಂತ ಇದ್ದರು. ಅವರ ಮನೆ ಮುಂದೆ ಒಂದು ದಿನ ಮೂರು ನಾಯಿಮರಿಗಳು ಪಿಳಿ ಪಿಳಿ ಕಣ್ಣು ಬಿಟ್ಟು ನಿಂತಿದ್ದವು. ಈ ನಾಯಿಮರಿಗಳನ್ನು ಹಿಂದೆ ಎಂದೂ ನೋಡಿದ್ದೇಯಿಲ್ಲ. ಗೌಡರ ಗುಂಡಪ್ಪನ ಮಗ ಚಿಂಟು ಬೆಳಿಗ್ಗೆ ಎದ್ದು ಅಂಗಳಕ್ಕೆ ಬಂದಾಗ ಈ ನಾಯಿಮರಿಗಳನ್ನು ನೋಡಿ ಸಂತೋಷಗೊಂಡನು. ಹಾಗೆ ಹತ್ತಿರ ಬಂದು ಮರಿಗಳ ಬಳಿ ಕುಳಿತು ನಿಧಾನವಾಗಿ ಬೆನ್ನು ಸವರಿದನು. ಪಾಪ ಮರಿಗಳು ಮೊದಲು ಕಣ್ಣು ಮುಚ್ಚಿ ತೆಗೆದು ಚಿಂಟುನನ್ನೇ ಪಿಳಿ ಪಿಳಿ ನೋಡಿದವು. ಚಿಂಟು ಮನೆಯೊಳಗೆ ಓಡಿ ಹೋದವನೇ ಅಮ್ಮನ ಬಳಿ ಹಾಲನ್ನು ಕೇಳಿದನು. ‘ಅಂಗಳದಲ್ಲಿ ಮೂರು ನಾಯಿಮರಿಗಳು ಬಂದಿವೆ. ಪುಟ್ಟವು. ಎಷ್ಟು ಚೆಂದ ಇದ್ದಾವೆ ಗೊತ್ತಾ? ನೀನು ನೋಡು ಬಾ’ ಎಂದು ಒತ್ತಾಯಿಸಿ ಹಾಲಿನೊಂದಿಗೆ ಅಮ್ಮನನ್ನು ಕರೆದುಕೊಂಡು ಅಂಗಳಕ್ಕೆ ಓಡೋಡಿ ಬಂದನು. ಒಂದು ಬಟ್ಟಲಲ್ಲಿ ಮರಿಗಳಿಗೆ ಮೊದಲು ಹಾಲು ಹಾಕಿದನು. ಅವು ಸುಮ್ಮನೆ ಕುಳಿತಿದ್ದವು. ಬಟ್ಟಲಲ್ಲಿ ಹಾಲು ಕುಡಿಯುವುದೂ ಮರಿಗಳಿಗೆ ತಿಳಿದಿರಲಿಲ್ಲ. ಚಿಂಟು ಹಾಲಿನ ಬಟ್ಟಲನ್ನು ಮೂತಿಯ ಹತ್ತಿರಯಿಟ್ಟು ಕುಡಿಸಲು ಪ್ರಯತ್ನಿಸುತ್ತಿದ್ದ. ‘ಇವುಗಳ ತಾಯಿ ಬಿಟ್ಟು ಹೋಗಿದೆ. ಮತ್ತೆ ಬಂದರೂ ಬರಬಹುದು’ ಎನ್ನುತ್ತಾ ಮತ್ತೆ ಒಳಹೋದರು. ಚಿಂಟೂಗೆ ಬೇಜಾರಾಯಿತು. ಅವರಮ್ಮ ಬಂದು ಕರೆದುಕೊಂಡು ಹೋದರೆ ಹೇಗೆಂದು ಮರಿಗಳನ್ನು ಎತ್ತಿಕೊಂಡು ಹಿತ್ತಲಿಗೆ ಹೋದನು. ಅಲ್ಲಿ ಮಲಗಲು ಭತ್ತದ ಒಣಹುಲ್ಲನ್ನು ಹಾಸಿ ಅದರ ಮೇಲೆ ಗೋಣಿಚೀಲ ಹರಡಿ ಮಲಗಿಸಿದನು. ಮೇಲೆ ಬಟ್ಟೆಯನ್ನು ಹೊದಿಸಿದನು. ಅವು ಹೊರ ಹೋಗಬಾರದೆಂದು ಮತ್ತು ಅವರಮ್ಮನಿಗೆ ಕಾಣಬಾರದೆಂದು ದೊಡ್ಡ ಬಿದಿರಿನ ಬುಟ್ಟಿಯನ್ನು ಮುಚ್ಚಿದನು. ಈಗ ಚಿಂಟುಗೆ ಸಮಾಧಾನ ವಾಯಿತು.

ನಂತರ ಈ ವಿಚಾರವನ್ನು ಗೆಳೆಯರಿಗೆಲ್ಲಾ ತಿಳಿಸಬೇಕೆಂದುಕೊಂಡನು. ಅಷ್ಟರಲ್ಲಿ ಅಮ್ಮ ಬಿಸಿ ಬಿಸಿ ದೋಸೆ ತಿನ್ನಲು ಕೂಗುತ್ತಿದ್ದಳು. ಚಿಂಟುವಿಗೆ ಸ್ನಾನ ಮಾಡುವಾಗ, ದೋಸೆ ತಿನ್ನುವಾಗ ನಾಯಿಮರಿಗಳದೇ ಚಿಂತೆ. ಬೇಗ ಅವನು ತನ್ನ ಗೆಳೆಯರನ್ನೆಲ್ಲಾ ಕರೆದುಕೊಂಡು ಹಿತ್ತಲಿಗೆ ಬಂದನು. ಮುಚ್ಚಿದ ಬುಟ್ಟಿಯನ್ನು ತೆಗೆದಾಗ ಗೆಳೆಯರೆದುರಿಗೆ ತುಂಬಾ ಹೆಮ್ಮೆಯೆನಿಸಿತು. ಮರಿಗಳು ಮುದ್ದು ಮುದ್ದಾಗಿ ಒಂದರ ಮೇಲೊಂದು ಮಲಗಿ ನಿದ್ರಿಸುತ್ತಿದ್ದವು. ನೋಡಲು ಕಣ್ಣುಗಳು ಸಾಲದೆನಿಸಿತು. ಒಂದು ಮರಿ ನಿದ್ದೆ ಮಾಡುತ್ತಲೇ ಕಣ್ಣು ಪಿಳಿ ಪಿಳಿ ಬಿಟ್ಟು ಮತ್ತೆ ಮುಚ್ಚುತ್ತಿತ್ತು. ಮತ್ತೊಂದು ಆಗಾಗ ಬಾಲ ಅಲ್ಲಾಡಿಸುತ್ತಿತ್ತು. ಗೆಳೆಯರೆಲ್ಲಾ ಚಿಂಟುವಿನ ಅದೃಷ್ಟವನ್ನು ಕೊಂಡಾಡಿದರು. ಆಗಾಗ ತಾವು ಬಂದು ಮರಿಗಳೊಂದಿಗೆ ಆಡಲು ಚಿಂಟುವಿನ ಒಪ್ಪಿಗೆ ಪಡೆದರು.

ಮರಿಗಳು ಚಿಂಟು ಹಾಕಿದ ಹಾಲನ್ನು ಕುಡಿದು ಸುಖ ನಿದ್ರೆಗೆ ಜಾರಿದವು. ಈಗ ಅವರೆಲ್ಲಾ ನಾಯಿಮರಿಗಳಿಗೆ ಹೆಸರಿಡಲು ತೀರ್ಮಾನಿಸಿದನು. ಯಾವ ಮರಿಗೆ ಯಾವ ಹೆಸರು ಸರಿ ಹೋಗುತ್ತೆಂತ ಮಾತನಾಡಿ ಗುಂಡು ಗುಂಡಾಗಿದ್ದ ಮರಿಗೆ ಭೀಮಯೆಂದೂ, ಸ್ವಲ್ಪ ತೆಳ್ಳಗಿದ್ದರೂ ಎಲ್ಲರನ್ನೂ ಪಿಳಿ ಪಿಳಿ ನೋಡುತ್ತಿದ್ದ ಮರಿಗೆ ಅರ್ಜುನನೆಂದೂ, ಈ ಎರಡೂ ಮರಿಗಳನ್ನು ತನ್ನ ಮೇಲೆ ಮಲಗಿಸಿಕೊಂಡಿದ್ದ ಮರಿಗೆ ಧರ್ಮ ಎಂದೂ ಹೆಸರಿಟ್ಟರು. ಎಲ್ಲರ ಸಂತೋಷಕ್ಕೆ ಪಾರವೇ ಇರಲ್ಲಿಲ್ಲ. ಚಿಂಟು ಹಾಗೂ ಗೆಳೆಯರ ಮಾತುಕತೆ ಮುಗಿಯಲಿಲ್ಲ. ಮರಿಗಳಿಗೆ ಏನೇನು ಕಲಿಸಬೇಕೆಂದು ಮಾತನಾಡಿದರು. ಎತ್ತರಕ್ಕೆ ಹಾರುವುದನ್ನು ಕಲಿಸಲು ನಿಶಾಂತ್ ಒಪ್ಪಿಕೊಂಡನು. ಚೀಲ ತೆಗೆದುಕೊಂಡು ಹೋಗಿ ಸಾಮಾನು ತರುವುದನ್ನು ಕಲಿಸುತ್ತೇನೆಂದು ಯೋಗೀಶ್ ಹೇಳಿದ. ಇವರ ಮಾತುಗಳೆಲ್ಲಾ ಮುಗಿಯುವಷ್ಟರಲ್ಲಿ ಮರಿಗಳು ನಿದ್ದೆ ಮುಗಿಸಿ ಮೈ ಮುರಿದು ಮತ್ತೆ ಪಿಳಿ ಪಿಳಿ ಕಣ್ಣು ಬಿಡುತ್ತಾ ಎದ್ದು ನಿಂತವು. ಚಿಂಟುಗೆ ಗಾಬರಿಯಾಯಿತು. ಎಲ್ಲಿ ಹೋಗಿಬಿಡುತ್ತವೋ ಎಂದು. ಆದರೆ ಅವು ಇನ್ನೂ ಒಂದು ತಿಂಗಳ ಮರಿಗಳಾದ್ದರಿಂದ ಎಲ್ಲಿಗೂ ಹೋಗಲು ಗೊತ್ತಾಗುವುದಿಲ್ಲವೆಂದು ತನ್ನ ಅನುಭವವನ್ನು ಭುವನ್ ತಿಳಿಸಿದ್ದನು. ಎಲ್ಲರಿಗೂ ನೆಮ್ಮದಿ ಎನ್ನಿಸಿತು. ಮಧ್ಯಾಹ್ನ ಹಾಗೂ ರಾತ್ರಿ ಊಟವನ್ನು ಏನೇನು ಕೊಡುವುದು ಎಂದೂ ಮಾತನಾಡಿದರು. ಮರಿಗಳಿಗೆ ಅಂಗಿ ಸ್ವೆಟರ್ ಹೊಲಿಯಬೇಕು. ಕುತ್ತಿಗೆಗೆ ಬಣ್ಣದ ಬೆಲ್ಟ್ ಕಟ್ಟಿ ಅಂದಗೊಳಿಸುವ ಬಗ್ಗೆ ವಿಶೇಷ ಗಮನ ಹರಿಸಿದರು. ಇಷ್ಟೆಲ್ಲದರ ಮಧ್ಯ ಅಮ್ಮ ಹೇಳಿದ ಮಾತು ನೆನಪಾಗಿ ಚಿಂಟುಗೆ ಬೇಜಾರಾಗುತ್ತಿತ್ತು. ಅದನ್ನು ತನ್ನ ಗೆಳೆಯರ ಮುಂದೆ ಹೇಳಿಕೊಂಡನು. ಮರಿಗಳ ಅಮ್ಮ